ಮೈ.ವಿ.ವಿ. ನಿಲಯ/ಆ.ಶಾ./ರವಾನೆ ವಿಭಾಗ
ಕಾರ್ಯನಿರ್ವಾಹಕ ಸಹಿ.................
ದಿನಾಂಕ:........04/03/2020

ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ:ಎಸಿ.6/387/2019-19

ದಿನಾಂಕ: 29.02.2020.

## ಅಧಿಸೂಚನೆ

ವಿಷಯ: BASLP ಕೋರ್ಸಿನ ತರಗತಿಗಳಿಗೆ ಕನ್ನಡ ವಿಷಯದ ಪಠ್ಯಕ್ರಮ ರೂಪಿಸಿರುವ ಬಗೆಗೆ.

ಉಲ್ಲೇಖ: 1. ದಿನಾಂಕ:01-01-2020 ಮತ್ತು 24-01-2020 ರಂದು ಜರುಗಿದ ಕನ್ನಡ ಅಧ್ಯಯನ ಮಂಡಳಿ (UG) ಸಭೆಯ ನಡಾವಳಿ.
2. ದಿನಾಂಕ: 17.02.2020 ರಂದು ಜರುಗಿದ ಕಲಾ ನಿಕಾಯ ಸಭೆಯ ತೀರ್ಮಾನ.

*****

ದಿನಾಂಕ: 01-01-2020 ಮತ್ತು 24-01-2020 ರಂದು ಜರುಗಿದ ಕನ್ನಡ ಅಧ್ಯಯನ ಮಂಡಳಿ ಸಭೆಯು (UG) ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ JSS Institute of Speech & hearing ಮತ್ತು All India Institute of Speech & hearing ಪದವಿ ಕಾಲೇಜುಗಳಲ್ಲಿ BASLP ಕೋರ್ಸಿಗೆ ಪಠ್ಯಕ್ರಮವನ್ನು ರೂಪಿಸಿ 2019-20ನೇ ಶೈಕ್ಷಣಿಕ ಸಾಲಿನ 2ನೇ ಸೆಮಿಸ್ಟರ್‌ನಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ ಜಾರಿಗೆ ತರಲು ಶಿಫಾರಸು ಮಾಡಿರುತ್ತಾರೆ.

ದಿನಾಂಕ 17.02.2020 ರಂದು ಜರುಗಿದ ಕಲಾ ನಿಕಾಯ ಸಭೆಯು ಮೇಲಿನ ಪ್ರಸ್ತಾವನೆಯನ್ನು ಅನುಮೋದಿಸಿರುವುದರಿಂದ ಶೈಕ್ಷಣಿಕ ಮಂಡಳಿ ಅನುಮೋದನೆಯನ್ನು ಕಾಯ್ದಿರಿಸಿ, ಈ ಅಧಿಸೂಚನೆ ಹೊರಡಿಸಲಾಗಿದೆ.

ಮೇಲ್ಕಂಡ ಪಠ್ಯಕ್ರಮ ಹಾಗೂ ಇತರೆ ಅಂಶಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ **www.uni-mysore.ac.in** ಪಡೆಯಬಹುದಾಗಿದೆ.

**ಕುಲಸಚಿವರಿಂದ ಕರಡು ಅನುಮೋದಿಸಿದೆ.**

04/03/20
ಸಹಾಯಕ ಕುಲಸಚಿವ (ಶೈಕ್ಷಣಿಕ)
Assistant Registrar (Academic)
University of Mysore
Mysore

ಇವರಿಗೆ:

1. ಕುಲಸಚಿವರು (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಡೀನರು, ಕಲಾ ನಿಕಾಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
3. ಅಧ್ಯಕ್ಷರು, ಕನ್ನಡ ಅಧ್ಯಯನ ಮಂಡಳಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
4. ನಿರ್ದೇಶಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.
5. ಪ್ರಾಂಶುಪಾಲರು, AIISH / JSS Institute of Speech & hearing, Mysore.
6. ಉಪಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಆಡಳಿತ ವಿಭಾಗ ಮತ್ತು ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ರಕ್ಷಾ ಕಡತಕ್ಕೆ.

# 24–01–2020ರ ಕನ್ನಡ ಸ್ನಾತಕ ಅಧ್ಯಯನ ಮಂಡಳಿ ತುರ್ತು ಸಭೆಯ ನಿರ್ಣಯಗಳು

ಮೈಸೂರಿನ ಜಿ.ಎಸ್.ಎಸ್. ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರ ಪತ್ರ ಸಂಖ್ಯೆ ಜೆ.ಎಸ್.ಎಸ್.ಐ.ಎಸ್.ಹೆಚ್ 4/1186/2019–20 ದಿನಾಂಕ : 13–01–2020ರಲ್ಲಿ ಕೇಳಲಾಗಿದ್ದ ಪಠ್ಯ ಕ್ರಮವನ್ನು ನಿಗದಿಪಡಿಸುವ ಸಂಬಂಧ ದಿನಾಂಕ :24–01–2020 ರಂದು ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಸರ್ವ ಸದಸ್ಯರ ವಿಶೇಷ ಸಭೆಯನ್ನು ನಡೆಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಹಾಗೂ ಜೆ.ಎಸ್.ಎಸ್.ಐ.ಎಸ್.ಹೆಚ್ ಸಂಸ್ಥೆಗಳಲ್ಲಿ ನಡೆಯುತ್ತಿರುವ ಪದವಿ ತರಗತಿಗಳಿಗೆ 2019–20 ರಿಂದ ಯುಜಿಸಿ ನಿಯಮಾವಳಿಯ ಪ್ರಕಾರ ಸಿಬಿಸಿಎಸ್ ಪದ್ಧತಿಯನ್ನು ಅಳವಡಿಸಿಕೊಂಡಿರುತ್ತಾರೆ. ಈ ಕೋರ್ಸಿನ ಎರಡನೆ ಸೆಮಿಸ್ಟರ್, BASLP ಯಲ್ಲಿ ಒಂದು ಭಾಷೆಯ ಪತ್ರಿಕೆ 100 ಅಂಕಗಳಿಗೆ ಓದುವುದು ಕಡ್ಡಾಯವಾಗಿರುತ್ತದೆ. ಪ್ರಸ್ತುತ ಈ ಎರಡೂ ಸಂಸ್ಥೆಗಳಲ್ಲಿ ಅನೇಕ ಕನ್ನಡೇತರ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಅವರಿಗೆ ದಿನನಿತ್ಯ ವ್ಯವಹಾರದ ಬಳಕೆಗೆ ಅಗತ್ಯವಿರುವಷ್ಟು ಕನ್ನಡ ಕಲಿಸಲು ಪಠ್ಯಕ್ರಮವೊಂದನ್ನು ರೂಪಿಸುವ ಸಲುವಾಗಿ ದಿ:24–01–2020 ರಂದು ನಡೆದ ಕನ್ನಡ–ಅಧ್ಯಯನ ಮಂಡಳಿಯ ವಿಶೇಷ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

I.

- ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಹೊರ ತಂದಿರುವ ಪ್ರೊ. ಲಿಂಗದೇವರು ಹಳೆಮನೆಯವರು ರಚಿಸಿರುವ 'ಕನ್ನಡ ಕಲಿ' ಎಂಬ ಕೃತಿಯನ್ನು ಪಠ್ಯಪುಸ್ತಕವಾಗಿ ಗೊತ್ತು ಮಾಡಲು ಸರ್ವಾನುಮತದಿಂದ ನಿರ್ಧರಿಸಲಾಯಿತು.
- ಈ ಕೃತಿಯನ್ನು ಪಠ್ಯಪುಸ್ತಕವಾಗಿ ಅಳವಡಿಸಲು ಅನುಮತಿಗಾಗಿ ಕುಲಸಚಿವರು, ಕನ್ನಡವಿಶ್ವವಿದ್ಯಾಲಯ, ಹಂಪಿ ಇವರಿಗೆ ಅನುಮತಿ ಪತ್ರ ಬರೆಯಲು ಸಭೆ ತೀರ್ಮಾನಿಸಿತು.
- ವಿಶ್ವವಿದ್ಯಾನಿಲಯದ ಆದೇಶವನ್ನು ಕಾಯ್ದಿರಿಸಿ ಇದೇ ಸಾಲಿಗೆ ಈ ಪಠ್ಯಪುಸ್ತಕವನ್ನು ಅನುಸರಿಸುವಂತೆ ಮೇಲ್ಕಂಡ ಕಾಲೇಜುಗಳಿಗೆ ನಿರ್ದೇಶನ ನೀಡಲು ತೀರ್ಮಾನಿಸಲಾಯಿತು.
- ಈ ಕೃತಿಯಲ್ಲಿರುವ ಆಯ್ದ ಒಂಬತ್ತು ಅಧ್ಯಾಯಗಳನ್ನು ಪಠ್ಯವಾಗಿಡಲು ಚರ್ಚಿಸಿ, ಮಂಡಳಿಯ ಸದಸ್ಯರು ಒಮ್ಮತದಿಂದ ಸಮ್ಮತಿಯನ್ನು ಸೂಚಿಸಿದರು.

ಆಯ್ಕೆಯಾದ ಒಂಬತ್ತು ಅಧ್ಯಾಯಗಳನ್ನು ಒಟ್ಟು ನಾಲ್ಕು ಘಟಕಗಳಾಗಿ ಯೋಜಿಸಿ ಪಠ್ಯಕ್ರಮವನ್ನು ರೂಪಿಸಲಾಯಿತು. ಅದರ ವಿವರ ಈ ಕೆಳಗಿನಂತಿದೆ.

ಘಟಕ – 1

1. Introducing each other :- personal pronouns, possessive forms, Interrogative words.
2. Introducing each other :- personal pronouns, possessive forms, Yes/No Type Interrogative

**ಘಟಕ – 2**

Lesson 4 – Enquiring about college, qualitative and quantitative adjectives
Lesson 8– In a cloth shop. Color adjectives, defective verbs.

**ಘಟಕ – 3**

Lesson 15 - Routine activities of a student
Lesson 19 - Karnataka (lesson for reading)

**ಘಟಕ – 4**

Kannada Script

- ಅಕ್ಷರ ಮಾಲೆ, ಕಾಗುಣಿತ, ವ್ಯಾಕರಣ ಇತ್ಯಾದಿ. ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಕಲಿಸುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು.

II.

- ಬಿ.ಎ.ಎಸ್.ಎಲ್.ಪಿ ಗೆ ಪ್ರವೇಶ ಪಡೆದಿರುವ **ಕನ್ನಡ ಬಲ್ಲ** ವಿದ್ಯಾರ್ಥಿಗಳಿಗೆ ಬಿ.ಎಸ್ಸಿ ಎರಡನೇ ಸೆಮಿಸ್ಟರ್‌ನ ಕನ್ನಡ ಪಠ್ಯಪುಸ್ತಕವನ್ನು ಯಥಾವತ್ತಾಗಿ ಬೋಧನೆಗೆ ಬಳಸುವಂತೆ ನಿರ್ದೇಶನ ನೀಡುವ ಪ್ರಸ್ತಾವಕ್ಕೆ ಸರ್ವ ಸದಸ್ಯರು ಅನುಮೋದನೆ ನೀಡಿದರು.

ಪರೀಕ್ಷಾವಿಧಾನ :– BASLP ಕೋರ್ಸಿನ **ಕನ್ನಡೇತರ** ವಿದ್ಯಾರ್ಥಿಗಳಿಗೆ ಕನ್ನಡ ವಿಷಯದ ಅಂತಿಮ ಪರೀಕ್ಷೆ

80 ಅಂಕಗಳಿಗೆ ಒಬ್ಬ ಬಾಹ್ಯ ಪರೀಕ್ಷಕರ ಸಮ್ಮುಖದಲ್ಲಿ ನಡೆಸುವುದು.

- **ಕನ್ನಡ ಬಲ್ಲ** ವಿದ್ಯಾರ್ಥಿಗಳಿಗೆ ಹಾಲಿ ಇರುವ ಪರೀಕ್ಷಾ ಕ್ರಮವನ್ನೇ ಅನುಸರಿಸಲು ಸಭೆ ಒಮ್ಮತದಿಂದ ನಿರ್ಣಯಿಸಿತು.
- ಈ ಪಠ್ಯಕ್ರಮ ಹಾಗೂ ಪರೀಕ್ಷಾ ವಿಧಾನವನ್ನು ಪ್ರಸಕ್ತ 2019–20 ರ ಸಾಲಿನ ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುವುದು ಮತ್ತು 2020–21 ರ ಸಾಲಿನಿಂದ, BASLP ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಹೊಸ ಪಠ್ಯಕ್ರಮವನ್ನು ರೂಪಿಸಲು ಸಭೆಯಲ್ಲಿ ತಿರ್ಮಾನಿಸಲಾಯಿತು.

III.

- ಬಿ.ಎ 4 ನೇ ಸೆಮಿಸ್ಟರ್ ಐಚ್ಛಿಕ ಕನ್ನಡ ವಿದ್ಯಾರ್ಥಿಗಳಿಗೆ ಛಂದೋಗಂಗೋತ್ರಿ ಪಠ್ಯವು ತುಂಬಾ ವಿಸ್ತೃತವಾಗಿದ್ದು, ಅದರಲ್ಲಿ **ಮಾತ್ರಾವೃತ್ತಗಳು, ಹುಟ್ಟು ಮತ್ತು ಬೆಳವಣಿಗೆ** ಎಂಬ ಲೇಖನವನ್ನು ಕೈಬಿಡಲು ಸಭೆಯಲ್ಲಿ ನಿರ್ಧರಿಸಲಾಯಿತು.

IV.

- 5ನೇ ಮತ್ತು 6ನೇ ಸೆಮಿಸ್ಟರ್‌ನ **ಕನ್ನಡ ಐಚ್ಛಿಕ** ವಿದ್ಯಾರ್ಥಿಗಳಿಗೆ ಡಿಎಸ್‌ಇ ಪಠ್ಯಪುಸ್ತಕ ರಚನೆಗೆ ಸಂಬಂಧಿಸಿದಂತೆ ಕನ್ನಡ ಸ್ನಾತಕ ಅಧ್ಯಯನ ಮಂಡಲಿಯ ಸಭೆಯಲ್ಲಿ, ಚರ್ಚಿಸಿ ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.
- 5ನೇ ಮತ್ತು 6ನೇ ಸೆಮಿಸ್ಟರ್ ಪಠ್ಯಪುಸ್ತಕ ರಚನೆಗೆ ಕನ್ನಡ ಸ್ನಾತಕ–ಅಧ್ಯಯನ ಮಂಡಲಿಯ ಸದಸ್ಯರನ್ನೇ ಸಂಪಾದಕರನ್ನುಗಳಾಗಿ ಆಯ್ಕೆ ಮಾಡಲು ಸಭೆ ತೀರ್ಮಾನಿಸಿತು.
- 2020 ಜೂನ್‌ನಿಂದ 5 ನೇ ಸೆಮಿಸ್ಟರ್ ತರಗತಿಗಳು ಪ್ರಾರಂಭವಾಗುವುದರೊಳಗಾಗಿ ಐದು ಪಠ್ಯಪುಸ್ತಕಗಳನ್ನು ರಚಿಸಿ ಪ್ರಕಟಿಸುವ ಅಗತ್ಯವಿದೆ. ಆದ್ದರಿಂದ ಪುಠ್ಯಪುಸ್ತಕ ರಚನಾ ಸಂಬಂಧವಾಗಿ ತುರ್ತಾಗಿ ಒಂದು ಕಮ್ಮಟ ನಡೆಸಬೇಕೆನ್ನುವ ಬಗ್ಗೆ ವಿಶ್ವವಿದ್ಯಾನಿಲಯದ ಅನುಮತಿ ಕೋರಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಎಲ್ಲ ಸದಸ್ಯರಿಗೂ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಅಧ್ಯಕ್ಷರು
ಕನ್ನಡ ಅಧ್ಯಯನ ಮಂಡಳಿ